# <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೆಚ್.ಡಿ.ಕೋಟೆ</u>

ಸಿ.ಸಿ.336/2023

**ಪಿರ್ಯಾದುದಾರರು** **ಆರೋಪಿ**

**ವಿರುದ್ಧ**

ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಬೋರೇಗೌಡ ಮತ್ತು ಮತ್ತೊಬ್ಬರು

:: **ದೋಷಾರೋಪಣೆ** ::

**ಶ್ರೀ ಸಂತೋಷ ಕೊಠಾರಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹಚ್.ಡಿ.ಕೋಟೆ , ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ.ಬೋರೇಗೌಡ
   ಬಿನ್ ಲೇಟ್ ನಂಜೇಗೌಡ
   60 ವರ್ಷ, ವಿಳಾಸಃ ಕಣಿಯನಹುಂಡಿ ಗ್ರಾಮ,
   ಹೆಚ್.ಡಿ.ಕೋಟೆ ತಾಲ್ಲೂಕು,
   ಮೈಸೂರು ಜಿಲ್ಲೆ.
2. ಶ್ರೀ.ಜವರೇಗೌಡ
   ಬಿನ್ ಲೇಟ್ ಬೊಬ್ಬೇಗೌಡ
   65 ವರ್ಷ, ವಿಳಾಸಃ ಕಣಿಯನಹುಂಡಿ ಗ್ರಾಮ,
   ಹೆಚ್.ಡಿ.ಕೋಟೆ ತಾಲ್ಲೂಕು,
   ಮೈಸೂರು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ 17.04.2023 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಒಂದುಗೂಡಿ ಹೆಚ್.ಡಿ.ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ, ಕಣಿಯ್ಯನಹುಂಡಿ ಗ್ರಾಮದಲ್ಲಿ ಸಾಕ್ಷಿ–1 ಮತ್ತು ಸಾಕ್ಷಿ–2 ರವರುಗಳು ತಮ್ಮ ವಾಸದ ಮನೆಯ ಮುಂದೆ ಕುಳಿತ್ತಿದ್ದಾಗ ಸಾಕ್ಷಿ–1 ರವರ ಮನೆಯ ನಲ್ಲಿ ನೀರು 1 ನೇ ಆರೋಪಿಯಾದ ನಿಮ್ಮ ಮನೆಯ ಮುಂದೆ ಹರಿದ ವಿಚಾರದಲ್ಲಿ 1 ನೇ ಆರೋಪಿಯಾದ ನೀವು ಸಾಕ್ಷಿ–1 ರವರನ್ನು ಕುರಿತು "ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಪದೇ ಪದೇ ನಮ್ಮ ಮನೆಯ ಮುಂಭಾಗ ನೀರು ಹರಿಸಿ ಯಾಕೆ ತೊಂದರೆ ಕೊಡುತ್ತೀರಾ" ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ, ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ಸಾಕ್ಷಿ–1 ರವರನ್ನು ಕುರಿತು "ನಿನ್ನ ಮಗ ಲಾಯರ್ ಆದರೇ ನಮಗೆ ಏನು ಬೋಳಿ ಮಗನೆ, ಸೂಳೆ ಮಗನೆ" ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ

ಆರೋಪಿಗಳಾದ ನೀವುಗಳು ಮೂಲಕ ಭಾ.ದಂ.ಸಂ.ಕಲಂ **504** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಮನೆಯ ಮುಂದೆ ಬಿದ್ದಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಸಾಕ್ಷಿ–1 ರವರ ಬಲತೋಳಿಗೆ ಹೊಡೆದು, ಕೆಳಗೆ ಕೆಡವಿಕೊಂಡು ತನ್ನ ಹಲ್ಲಿನಿಂದ ಸಾಕ್ಷಿ–1 ರವರ ಎಡಕಂಕುಳ ಬಳಿ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ **324** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ಕೈಯಿಂದ ಸಾಕ್ಷಿ–1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ **323** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ **2** ನೇ ಆರೋಪಿಯಾದ ನೀವು ಸಾಕ್ಷಿ–1 ರವರನ್ನು ಕುರಿತು "ಇನ್ನೊಂದು ಸಲ ನಮ್ಮಗಳ ತಂಟೆಗೆ ಬಂದರೆ ನಿನ್ನನ್ನು ಮುಗಿಸದೇ ಬಿಡುವುದಿಲ್ಲ" ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ **506** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

12 ನೇ ಆಗಸ್ಟ್ ಮಾಹೆ 2025.

- ಸಹಿ /-

**(ಸಂತೋಷ ಕೊಠಾರಿ)**

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ